# ಝಣ ಝಣ ಹಣ

## ಹಣ ವಿನಿಮಯ ಮಾಧ್ಯಮವಾಗುವುದಕ್ಕೆ ಮುಂಚಿನ 'ಸಾಲ ಮತ್ತು ಬಡ್ಡಿ' ಚರಿತ್ರೆ !

ನಾವು ಇಂದು ನೋಡುತ್ತಿರುವ ಹಣದ ಪರಿಕಲ್ಪನೆ ಹೇಗಾಯಿತು ಎನ್ನುವುದು ನಮಗೆ ಕಳೆದ ಲೇಖನದಲ್ಲಿ ತಿಳಿಯಿತು. ಈ ಹಣದ ಬಳಕೆಯಾಗುವುದಕ್ಕೆ ಮುಂಚೆ ಹೇಗಿತ್ತು ನಮ್ಮ ಸಮಾಜ ಎನ್ನುವುದೂ ನಮಗೆ ತಿಳಿದಿದೆ. ಇಂದಿನ ಲೇಖನದಲ್ಲಿ ಸಾಲ (ಡೆಟ್ ) ಎಂದರೇನು ? ನಾವು ಇಂದು ನೋಡುತ್ತಿರುವ ಹಣದ ಉಗಮಕ್ಕೆ ಮುಂಚೆ ಸಾಲ ಇತ್ತೇ? ಬಡ್ಡಿ ಎಂದರೇನು? ಅದರ ಉಗಮ ಎಷ್ಟು ಹಳೆಯದು ಇದರ ಬಗ್ಗೆ ತಿಳಿದುಕೊಳ್ಳೋಣ.

ಮನುಷ್ಯ ಸಹಜ ಗುಣ ತನ್ನ ಬಳಿ ಇಲ್ಲದೆ ಇರುವ ವಸ್ತುವನ್ನ ಬೇರೆಯವರಿಂದ ಕೇಳಿ ಪಡೆಯುವುದು ಮತ್ತು ಅದನ್ನ ಉಪಭೋಗಿಸುವುದು. ಆ ಅರ್ಥದಲ್ಲಿ ನೋಡಿದರೆ ಬಾರ್ಟರ್ ಎಕ್ಸ್ಚೇಂಜ್ (ವಸ್ತು ವಿನಿಮಯ ) ಗೂ ಮುಂಚೆಯೇ ಸಾಲ ಇತ್ತು. ಹಣಕಾಸು ವ್ಯವಹಾರ ಇಂದಿನ ಮಟ್ಟ ಮುಟ್ಟುವುದಕ್ಕೂ ಮುಂಚೆಯೇ ತನಗೆ ಬೇಕಾದ ವಸ್ತುವನ್ನ ತನ್ನ ನೆರೆಹೊರೆಯವರನ್ನ ಕೇಳಿ ಪಡೆಯುವುದು ಅತ್ಯಂತ ಸಹಜ ಕ್ರಿಯೆಯಾಗಿತ್ತು. ಹಾಗೆ ಪಡೆದ ವಸ್ತುವನ್ನ ಒಂದಷ್ಟು ಸಮಯದ ನಂತರ ಮರಳಿ ಕೂಡುವುದೂ ಕೂಡ ಅಷ್ಟೇ ಸಹಜ ಕ್ರಿಯೆಯಾಗಿತ್ತು. ಆ ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಯ ನಡುವಿನ ನಂಬಿಕೆ, ಗೌರವಗಳೇ ವಿನಿಮಯದ ಆಧಾರವಾಗಿತ್ತು. ಕೊಟ್ಟದ್ದಕ್ಕೆ - ಪಡೆದದಕ್ಕೆ ಯಾವುದೇ ತೆರೆನಾದ ಪತ್ರ ಅಥವಾ ದಾಖಲೆ ಇರುತ್ತಿರಲಿಲ್ಲ. ದಿನಗಳೆದಂತೆ ಮನುಷ್ಯನ ಇನ್ನೊಂದು ಸಹಜ ಗುಣವಾದ ಆಸೆ ಬುರುಕುತನ ವ್ಯಕ್ತಿಗಳ ನಡುವಿನ ನಂಬಿಕೆಯನ್ನ ನುಂಗಿಹಾಕುತ್ತದೆ. ನಿಧಾನವಾಗಿ ಕೊಟ್ಟದ್ದಕ್ಕೆ - ಪಡೆದದಕ್ಕೆ ಲೆಕ್ಕ ಇಡಲು ಶುರು ಮಾಡುತ್ತಾರೆ. 'ನಾನು ನಿನಗೆ ಬೇಕಾದಾಗ ನೀನು ಕೇಳಿದ ವಸ್ತುವ ಕೊಟ್ಟೆ. ನಂತರ ಒಂದಷ್ಟು ಸಮಯದ ನಂತರ ನೀನು ನನಗೆ ತಿರುಗಿ ಕೊಟ್ಟೆ ಆದರೆ ಅದರಿಂದ ನನಗೇನು ಲಾಭ? ನೀನು ಆ ವಸ್ತುವನ್ನ ಉಪಭೋಗಿಸಿದಷ್ಟು 'ಸಮಯ' ನಾನು ಅದರಿಂದ ವಂಚಿತನಾದೆ. ಅದಕ್ಕೆ ಪರಿಹಾರವೇನು ?' ಎನ್ನುವ ನಾಗರಿಕ ಸಮಾಜದ ಪ್ರಶ್ನೆ 'ಬಡ್ಡಿ' ಯನ್ನ ಹುಟ್ಟಿಹಾಕಿತು.

ಹಾಗೆ ನೋಡಲು ಹೋದರೆ 'ಸಾಲ' ಮತ್ತು 'ಬಡ್ಡಿ' ಎರಡರ ಉಗಮದ ನಡುವೆ ಹೆಚ್ಚು ಅಂತರವಿಲ್ಲ. ಸಮಾಜದಲ್ಲಿ ಹೀಗೆ ಒಂದು ವಸ್ತುವನ್ನ ಬೇರೆಯವರಿಂದ ಪಡೆಯುವ ಕ್ರಿಯೆಗೆ ಸಾಲ ಎನ್ನುತ್ತಾರೆ ಎನ್ನುವ ಅರಿವು ಕೂಡ ಇರಲಿಲ್ಲ. ಆದರೆ ಅದು ಚಾಲನೆಯಲ್ಲಿತ್ತು. ಬಡ್ಡಿಯ ವಿಷಯದಲ್ಲೂ ಈ ಮಾತು ಸತ್ಯ. ಹಾಗಾದರೆ ಈ ಸಾಲ ಮತ್ತು ಬಡ್ಡಿ ಎಷ್ಟು ಹಳೆಯದಿರಬಹುದು? ಮನುಷ್ಯನ ಗುಣಗಳನ್ನ ಅಳತೆಗೋಲನ್ನಾಗಿ ಇಟ್ಟುಕೊಂಡು ನೋಡುವುದಾದರೆ ನಾಗರೀಕತೆ ಹುಟ್ಟಿನಿಂದ ಎಂದು ಹೇಳಿ ಬಿಡಬಹುದು. ನಮಗೆ ಬಂದ ಈ ಪ್ರಶ್ನೆಗೆ David Graeber ಎನ್ನುವ ಇಂಗ್ಲೆಂಡ್‌ನ ಮಾನವ ಶಾಸ್ತ್ರಜ್ಞ ತನ್ನ ಪುಸ್ತಕ 'ಸಾಲದ ಪ್ರಥಮ ಐದು ಸಾವಿರ ವರ್ಷಗಳು' ದಲ್ಲಿ ವಿವರಿಸಿದ್ದಾನೆ. ೨೦೧೧ ರಲ್ಲಿ ಹೊರಬಂದ ಈ ಪುಸ್ತಕದ ಪ್ರಕಾರ ಸಾಲ ಮತ್ತು ಬಡ್ಡಿ ಉಗಮವಾದದ್ದು ಸರಿಸುಮಾರು ೩೫೦೦ B.C ಸಮಯದಲ್ಲಿ. ಹಣದ ಉಗಮಕ್ಕೂ ಮುಂಚೆ 'ಡೆಟ್ ಇಸ್ ದ ಮನಿ' ಎನ್ನುವಂತಿತ್ತು. ಕೊಟ್ಟ ಸಾಲ ವಾಪಸ್ಸು ಕೊಡದೆ ಹೋದದ್ದು ಮಾನವ ಇತಿಹಾಸದಲ್ಲಿ ಹಲವು ಕದನಗಳಿಗೆ ನಾಂದಿ ಹಾಡಿದೆ. ಇದರಿಂದ ಆದ ತೊಂದರೆಗಳನ್ನ ಕಂಡ ಮತ್ತಷ್ಟು ನಾಗರೀಕತೆ ಕಲಿತ ಸಮಾಜ ಡೆಟ್ (ಸಾಲ ) ಸಹವಾಸವೇ ಬೇಡ, 'ನಿನಗೆ ಬೇಕಾದ ವಸ್ತುವ ಪಡಿ ಬದಲಿಗೆ ನಿನಗೆ ಅವಶ್ಯಕತೆ ಇರದ ವಸ್ತುವ ಕೊಡು' ಎನ್ನುವ ತತ್ವಕ್ಕೆ ಜೋತು ಬೀಳುತ್ತಾರೆ. ಇದು ವಸ್ತು ವಿನಿಮಯ ಬಾರ್ಟರ್ ಎಕ್ಸ್ಚೇಂಜ್ ಗೆ ದಾರಿ ಮಾಡಿಕೊಡುತ್ತದೆ. ನಂತರದ ಹಣದ ಪರಿಕಲ್ಪನೆ ಹೇಗಾಯ್ತು ಎನ್ನುವುದು ನಮಗೆ ತಿಳಿದಿದೆ.

ಸಾಲ ಪಡೆದವರು ಅದನ್ನ ತೀರಿಸಲು ಆಗದೆ ತಮ್ಮ ಮನೆ ಆಸ್ತಿಯ ಜೊತೆಗೆ ಹೆಂಡತಿ ಮಕ್ಕಳನ್ನು ಕೂಡ ಜೀತಕ್ಕೆ ತಳ್ಳಿದ ಉದಾಹರಣೆ ನಮಗೆ ಸಿಗುತ್ತದೆ ಹಾಗೆ ನೋಡಿದರೆ 'ಫ್ರೀಡಂ' ಎನ್ನುವ ಪದ 'ಡೆಟ್ ಫ್ರೀಡಂ' ಎನ್ನುವುದಕ್ಕೆ ಸಮಾನಾರ್ಥಕ ಪದವಾಗಿತ್ತು ಎಂದರೆ ಆಶ್ಚರ್ಯ ಎನ್ನಿಸಬಹುದು ಆದರೆ ಇದು ನಿಜ. ಫ್ರೀಡಂ ಎಂದರೆ 'ಮರಳಿ ತಾಯಿಗೆ ಹಿಂದಿರುಗಿಸು' ಎನ್ನುವ ಅರ್ಥ ಕೊಡುತ್ತದೆ. ಹಿಂದೆ

ಕೊಟ್ಟ ಸಾಲ ವಾಪಸ್ಸು ಬರದಿದ್ದಾಗ ಒತ್ತೆಗಾಗಿ ಮಕ್ಕಳನ್ನ ಸಾಲಕೊಟ್ಟವರು ಕರೆದೊಯ್ಯುವುದು ಸಾಮಾನ್ಯವಾಗಿತ್ತು. ಸಾಲ ವಾಪಸ್ಸು ಕೊಟ್ಟ ಮೇಲೆ ಅಥವಾ ಕೆಲವೊಮ್ಮೆ ಸಾಲ ಮನ್ನಾ ಮಾಡಿದಾಗ ಮಕ್ಕಳನ್ನ ತಿರುಗಿ ತಾಯಿಗೆ ಕೊಡುವುದಕ್ಕೆ ಫ್ರೀಡಂ ಎನ್ನುವ ಶಬ್ದವನ್ನ ಬಳಸುತ್ತಿದ್ದರು.

ಹೀಗೆ ಒಂದು ಸಾಮಾನ್ಯ ಸಾಲ ಎನ್ನುವುದು ಇಂದು ಅತ್ಯಂತ ವ್ಯವಸ್ಥಿತವಾಗಿ ಬ್ಯಾಂಕ್ ಮತ್ತಿತರ ಹಣಕಾಸು ಸಂಸ್ಥೆಗಳು ನೀಡುವ ಸೇವೆಯಾಗಿ ಮಾರ್ಪಟ್ಟಿದೆ. ಸಾಲ ಎನ್ನುವ ಒಂದು ಪದ ಇಂದು ಅನೇಕ ಸಾಲವಾಗಿದೆ ಉದಾಹರಣೆ ನೋಡೋಣ.

ಸುರಕ್ಷಿತ ಸಾಲ (Secured debt): ಬ್ಯಾಂಕ್ ಅಥವಾ ಇನ್ನಿತರ ಹಣಕಾಸು ಸಂಸ್ಥೆ ಮನೆಯನ್ನ, ಬಂಗಾರವನ್ನ ಅಥವಾ ಇನ್ನ್ಯಾವುದೇ ಬೆಲೆಬಾಳುವ ವಸ್ತುವನ್ನ ತಮ್ಮ ಬಳಿ ಅಡ ಇಟ್ಟುಕೊಂಡು ಸಾಲ ನೀಡುತ್ತಾರೆ. ಒಂದು ವೇಳೆ ಸಾಲ ತೆಗೆದು ಕೊಂಡವನು ವಾಪಸ್ಸು ಕೊಡಲು ತಕರಾರು ಮಾಡಿದರೆ ಬ್ಯಾಂಕಿಗೆ ನಷ್ಟವೇನೂ ಇಲ್ಲ. ತನ್ನ ಬಳಿ ಇರುವ ಬೆಲೆಬಾಳುವ ವಸ್ತುವನ್ನ ಹರಾಜು ಮೂಲಕ ಮಾರಿ ತಮ್ಮ ಸಾಲವನ್ನ ತುಂಬಿಕೊಳ್ಳುತ್ತಾರೆ. ಹೀಗಾಗಿ ಇದಕ್ಕೆ ಸುರಕ್ಷಿತ ಸಾಲ ಎಂದು ಕರೆಯಲಾಗುತ್ತದೆ.

ಅಸುರಕ್ಷಿತ ಸಾಲ (Unsecured debt): ಇದು ಸುರಕ್ಷಿತ ಸಾಲಕ್ಕೆ ಪೂರ್ಣ ವಿರುದ್ಧ. ಸಾಲ ಪಡೆದವನು ಹಿಂತಿರುಗಿಸದೆ ಹೋದರೆ ಹಣಕಾಸು ಸಂಸ್ಥೆ ಹಣವನ್ನ ಮರಳಿ ಪಡೆಯಲು ಹೆಣಗಬೇಕಾಗುತ್ತದೆ. ಹಾಗಾಗಿ ಇದಕ್ಕೆ ಅಸುರಕ್ಷಿತ ಸಾಲ ಎನ್ನಲಾಗುತ್ತದೆ.

ನಿಗದಿತ ಬಡ್ಡಿ ದರದ ಸಾಲ (Fixed interest rate debt): ಸಾಲದ ಮೇಲಿನ ಬಡ್ಡಿಯ ಮೊತ್ತವನ್ನ ನಿಗದಿತ ಸಮಯಕ್ಕೆ ನಿಗದಿಪಡಿಸಲಾಗುತ್ತದೆ ಹಾಗಾಗಿ ಇದಕ್ಕೆ ನಿಗದಿತ ಬಡ್ಡಿ ದರದ ಸಾಲ ಎಂದು ಕರೆಯಲಾಗುತ್ತದೆ.

ಬದಲಾಗುವ ಬಡ್ಡಿ ದರದ ಸಾಲ (Variable interest rate debt): ಸಾಲದ ಮೇಲಿನ ಬಡ್ಡಿ ಮಾರುಕಟ್ಟೆಯಲ್ಲಿ ಬಡ್ಡಿ ಏರಿಳಿತದ ಮೇಲೆ ಏರಿಳಿತ ಕಾಣುತ್ತದೆ, ಇಂತಹ ಸಾಲವನ್ನ ಬದಲಾಗುವ ಬಡ್ಡಿ ದರದ ಸಾಲ ಎನ್ನಲಾಗುತ್ತದೆ.

ನಿಗದಿತ ಸಮಯದ ಸಾಲ (Term loan ): ನಿಗದಿತ ಸಮಯದ ಸಾಲವನ್ನ ಟರ್ಮ್ ಲೋನ್ ಎನ್ನುತ್ತಾರೆ. ಉದಾಹರಣೆಗೆ ೫ ವರ್ಷದಲ್ಲಿ ಪಡೆದ ಸಾಲವನ್ನ ಬಡ್ಡಿ ಸಮೇತ ವಾಪಸ್ಸು ಕೊಡಬೇಕು ಎನ್ನುವುದು ಈ ವರ್ಗೀಕರಣಕ್ಕೆ ಬರುತ್ತದೆ.

ಇಷ್ಟಲ್ಲದೆ ಪೆಟ್ರೋಲ್ ಹಾಕಿಸಿಕೊಳ್ಳಲು ಕಾರ್ಡ್, ತರಕಾರಿ ಕೊಳ್ಳಲು ಹೀಗೆ ಸಾಲದ ಕಾರ್ಡಗಳನ್ನ (ಕ್ರೆಡಿಟ್ ಕಾರ್ಡ್ ) ತನ್ನ ಗ್ರಾಹಕರಿಗೆ ಕೊಡಲು ಬ್ಯಾಂಕ್ಗಳ ನಡುವೆ ಪೈಪೋಟಿಯೇ ಇದೆ. ಹಣವನ್ನ ಗಳಿಸುವ ಮೊದಲೇ ಪಡೆದು ಉಪಯೋಗಿಸುವ ಮಾರುಕಟ್ಟೆ ಸೃಷ್ಟಿಸಿ, ಸಾಲವನ್ನ ಇನ್ನಷ್ಟು ಆಕರ್ಷಕವನ್ನಾಗಿ ಮಾಡಿ 'ಡೆಟ್ ಇಸ್ ನ್ಯೂ ಮನಿ' ಎನ್ನುವ ಮಟ್ಟಕ್ಕೆ ತಂದಿದ್ದೇವೆ. ಕ್ರಿಸ್ತ ಪೂರ್ವ ೩೫೦೦ ಇಸವಿಯಲ್ಲಿ ಹಣವೇ ಇರಲಿಲ್ಲ ! ಡೆಟ್ ಅರ್ಥಾತ್ ಸಾಲವೇ ಹಣ, ಸಾಲವೇ ವಿನಿಮಯ ಮಾಧ್ಯಮವಾಗಿತ್ತು ! ಇಷ್ಟೂ ವರ್ಷ ನಾಗರಿಕತೆಯ ಮತ್ತು ಅಭಿವೃದ್ಧಿಯ ಹೆಸರಲ್ಲಿ ಸುತ್ತಿದಷ್ಟೇ ಲಾಭ ಮತ್ತೆ 'ಬ್ಯಾಕ್ ಟು ಸ್ಕ್ವೇರ್ ಒನ್' ಎನ್ನುವಂತೆ ಮರಳಿ ಡೆಟ್ ಇಸ್ ದಿ ಮನಿ ಎನ್ನುವ ಹಂತಕ್ಕೆ ಬಂದಿದ್ದೇವೆ. ನಿಜವಾಗಿ ವಿಶ್ಲೇಷಿಸಿ ನೋಡಿದರೆ ಹಣ, ಸಾಲವನ್ನ, ಬಡ್ಡಿಯನ್ನ ಅಳೆಯುವ ಮತ್ತು ನಿಖರವಾಗಿ ಲೆಕ್ಕ ಇಡುವ ಮಾಪಕವೇ ಹೊರತು ಇನ್ನೇನೂ ಅಲ್ಲ. ಸಾಲ ಅಂದಿಗೂ, ಇಂದಿಗೂ ಎಂದೆಂದಿಗೂ ನಿಜವಾದ ಹಣ.

***

# ಕಾಗದ ಹಣದ ಇತಿಹಾಸ

ಕಾಗದ ಹಣ, ಅಂದರೆ ಪೇಪರ್ ಕರೆನ್ಸಿಗೂ ಮುಂಚೆ ಲೋಹಗಳು, ಚರ್ಮ, ದವಸಧಾನ್ಯ, ಜಾನುವಾರು ಹೀಗೆ ಅನೇಕ ವಸ್ತುಗಳು ವಿನಿಮಯ ಮಾಧ್ಯಮವಾಗಿ ಚಾಲ್ತಿಯಲ್ಲಿದ್ದವು. ಅಷ್ಟೇ ಅಲ್ಲ, ಅಂದಿನ ದಿನಗಳಲ್ಲಿ ಸಾಕಷ್ಟು ಯಶಸ್ಸನ್ನೂ ಗಳಿಸಿದ್ದವು.

ಆದರೆ ಯಾವುದೇ ವ್ಯವಸ್ಥೆ ಒಂದು ಹಂತದ ನಂತರ ಬದಲಾವಣೆ ಕೇಳುತ್ತದೆ. ಅದಕ್ಕೆ ಮೂಲ ಕಾರಣ ಬದಲಾದ ಜೀವನ ಶೈಲಿ, ಬದಲಾದ ವ್ಯಾಪಾರ ಕ್ರಮ. ಹೀಗೆ ಬದುಕಿನಲ್ಲಿ, ಸಮಾಜದಲ್ಲಿ ಆದ ಬದಲಾವಣೆಗೆ ಒಗ್ಗಿಕೊಳ್ಳಲು ವಿನಿಮಯ ಮಾಧ್ಯಮ ಕೂಡ ಬದಲಾಗದೆ ಅನ್ಯ ಮಾರ್ಗವಿರಲಿಲ್ಲ.

ಕೇವಲ ಒಂದು ನಿಗದಿತ ಪ್ರದೇಶದಲ್ಲಿ ವಿನಿಮಯ ಮಾಧ್ಯಮವಾಗಿ ಲೋಹ, ಜಾನುವಾರು ಇತರ ವಸ್ತುಗಳು ಬಳಸುವುದರಲ್ಲಿ ಯಾವುದೇ ತೊಂದರೆ ಇರಲಿಲ್ಲ. ವ್ಯಾಪಾರಸ್ಥರು ತಮ್ಮ ವ್ಯಾಪಾರದ ಸಲುವಾಗಿ ತಮ್ಮ ಪ್ರದೇಶ ಬಿಟ್ಟು ದೂರದ ಊರುಗಳಿಗೆ ಪ್ರಯಾಣ ಮಾಡಲು ಶುರು ಮಾಡಿದರು. ಹಣದಂತೆ ಬಳಸಲು ಲೋಹವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಕೊಂಡೊಯ್ಯುವುದು ಸಮಸ್ಯೆಯಾಯಿತು. ಕಳ್ಳಕಾಕರ ಕಾಟ, ಹವಾಮಾನ ವೈಪರೀತ್ಯಗಳ ಜೊತೆಗೆ ಲೋಹದ ತೂಕ ಕೂಡ ಸಮಸ್ಯೆ ಸೃಷ್ಟಿಸಿತು.

ವ್ಯಾಪಾರಸ್ಥರು ಈ ಸಮಸ್ಯೆಗೆ ಒಂದು ಪರಿಹಾರ ಕಂಡುಕೊಂಡರು. ತಮ್ಮ ಊರಿನ ಪ್ರಸಿದ್ಧ ವ್ಯಕ್ತಿ ಅಥವಾ ಮನೆತನದವರ ಬಳಿ ತಮ್ಮಲ್ಲಿದ್ದ ಲೋಹವನ್ನು ಇಟ್ಟು ಅವರಿಂದ ಒಂದು ಮುಚ್ಚಳಿಕೆ ಪತ್ರ ಬರೆಸಿಕೊಳ್ಳುವುದೇ ಆ ಪರಿಹಾರ. ಆ ಪತ್ರ ಹೊಂದಿರುವವರು ತಮ್ಮ ಬಳಿ ಇಷ್ಟು ಮೌಲ್ಯದ ಲೋಹವನ್ನು ಇಟ್ಟಿರುವರೆಂಬ ಹೇಳಿಕೆಯೊಂದಿಗೆ ಅಷ್ಟು ಮೌಲ್ಯಕ್ಕೆ ತಾನು ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಕೂಡ ಆ ವ್ಯಕ್ತಿಗಳು ಬರೆದುಕೊಡುತ್ತಿದ್ದರು. ಮತ್ತೊಂದು ಊರಿನ ಪ್ರಸಿದ್ಧ ವ್ಯಕ್ತಿ ಅಥವಾ ಮನೆತನ ಇಂತಹ ಪತ್ರವನ್ನು ಮಾನ್ಯ ಮಾಡುತ್ತಿತ್ತು. ಎರಡು ಬೇರೆ ಬೇರೆ ಊರಿನ ವ್ಯಕ್ತಿ ಅಥವಾ ಮನೆತನದ ನಡುವಿನ ಮೇಲಿನ ನಂಬಿಕೆ ವ್ಯಾಪಾರ ನಡೆಯಲು ಆಧಾರವಾಗಿತ್ತು. ಹಾಗೆ ನೋಡಿದರೆ ಇವು ಇಂದಿನ ಪೇಪರ್ ಕರೆನ್ಸಿ ಮಟ್ಟದ ವಿನಿಮಯವಲ್ಲದಿದ್ದರೂ, ಪೇಪರ್ ಕರೆನ್ಸಿ ಉಗಮಕ್ಕೆ ಓಂಕಾರ ಹಾಕಿದ ವ್ಯವಸ್ಥೆ ಅನ್ನುವುದಂತೂ ಸ್ಪಷ್ಟ.

**ಯಾರು ಈ ರೀತಿಯ ವ್ಯವಸ್ಥೆಯ ಹರಿಕಾರರು ?**

ಈ ರೀತಿಯ ವ್ಯವಸ್ಥೆ ಮೊದಲು ಜಾರಿಗೆ ಬಂದದ್ದು ಏಳನೇ ಶತಮಾನದಲ್ಲಿ ಚೀನಾ ದೇಶವನ್ನು ಆಳಿದ ಟಾಂಗ್ ಮನೆತನದ (tang dynasty) ಅವಧಿಯಲ್ಲಿ. ಶ್ರೀಮಂತ ವರ್ತಕರು ವ್ಯಾಪಾರ ವಹಿವಾಟು ಸರಾಗವಾಗಿ ಆಗಲು 'ಮುಚ್ಚಳಿಕೆ ಪತ್ರ' ಅಥವಾ ಪ್ರಾಮಿಸರಿ ನೋಟ್ ಬರೆದುಕೊಡಲು ಶುರು ಮಾಡಿದರು. ಅವು ಖಾಸಗಿ ವ್ಯಕ್ತಿಗಳು ಬರೆದು ಕೊಟ್ಟ ಮುಚ್ಚಳಿಕೆ ಪತ್ರವಾಗಿತ್ತು. ಅಂದಿನ ದಿನಗಳಲ್ಲಿ ಹಲವು ಶ್ರೀಮಂತ ವರ್ತಕರು ಈ ರೀತಿಯ ಪತ್ರಗಳನ್ನ ನೀಡುತ್ತಿದ್ದರು. ಟಾಂಗ್ ಮನೆತನ ಅಧಿಕೃತವಾಗಿ ಇಂತಹ ಪತ್ರಗಳನ್ನ ಚಲಾವಣೆ ಕೂಡ ತಂದಿತ್ತು.

ಈ ರೀತಿಯ ವ್ಯವಸ್ಥೆ ಅಭಾದಿತವಾಗಿ ೫೦೦ ವರ್ಷ ನಡೆದಿದ್ದಕ್ಕೆ ಇತಿಹಾಸ ಸಾಕ್ಷಿ. ನಂತರದ ದಿನಗಳಲ್ಲಿ ವ್ಯವಸ್ಥೆ ಕುಸಿಯಲು ಮನುಷ್ಯನ ಲೋಭ, ಕಡಿಮೆಯಲ್ಲಿ ಹೆಚ್ಚು ಪಡೆಯುವ ಹಪಹಪಿಕೆ ಕೆಲಸ ಮಾಡುತ್ತದೆ. ತನ್ನಲ್ಲಿರುವ ಲೋಹದ (ಚಿನ್ನ) ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯದ ಪತ್ರಗಳ ವಿತರಣೆ ಜಗತ್ತಿನ ಮೊಟ್ಟ ಮೊದಲ ಇನ್ಫ್ಲೇಶನ್ (ಹಣದುಬ್ಬರ ) ಸೃಷ್ಟಿ ಮಾಡುತ್ತೆ . ಚೀನಾ ಜಗತ್ತಿನ ಪ್ರಥಮ ಆರ್ಥಿಕ ಕುಸಿತಕ್ಕೂ ಸಾಕ್ಷಿ ಆಗುತ್ತದೆ.

ಹೀಗೆ ವ್ಯವಸ್ಥೆ ಮೇಲಿನ ಅಪನಂಬಿಕೆ ಹೆಚ್ಚಾಗಿ ಈ ರೀತಿಯ ವ್ಯವಸ್ಥೆಯಿಂದ ಚೀನಾ ೧೪ ನೇ ಶತಮಾನದ ಹೊತ್ತಿಗೆ ಪೂರ್ಣ ವಿಮುಖವಾಗುತ್ತದೆ. ಇವರಿಂದ ಪ್ರೇರಿತರಾದ ಮಂಗೋಲರು ಈ ವ್ಯವಸ್ಥೆಯನ್ನ ಅಪ್ಪಿಕೊಳ್ಳುತ್ತಾರೆ. ೧೭ ನೇ ಶತಮಾನದ ಹೊತ್ತಿಗೆ

ಯೂರೋಪ್ ಈ ವ್ಯವಸ್ಥೆಯನ್ನ ಹೆಚ್ಚು ಪ್ರಖ್ಯಾತಿಗೆ ತರುತ್ತದೆ.  ಟಾಂಗ್ ಮನೆತನದ ತಾಮ್ರ ಹಾಗೂ ಚಿನ್ನದ ಕಾಯಿನ್ (ನಾಣ್ಯ) ನಡುವೆ ಚೌಕಾಕಾರದ ರಂಧ್ರ ಇರುತ್ತಿತ್ತು. ಇದನ್ನ ಅವರು  kai-yuans ಎಂದು ಕರೆಯುತ್ತಿದ್ದರು. ಇದು ಇತರ ದೇಶದ ಭಾಷಿಕರ ಬಾಯಿಯಲ್ಲಿ ಅಪಭ್ರಂಶಗೊಂಡು ಕಾಯಿನ್ ಆಗಿ ಪರಿವರ್ತನೆಗೊಂಡು ಕೊನೆಗೆ ಕ್ಯಾಶ್  ಎಂದರೆ ಹಣ  ಎನ್ನುವ ಮಟ್ಟಕ್ಕೆ ಬಂದು ನಿಂತಿದೆ. ಜಗತ್ತಿಗೆ ಕಾಯಿನ್, ಕ್ಯಾಶ್ ನೀಡಿದ ಚೀನಾ ತಾನೇ ಸೃಷ್ಟಿಸಿದ ವ್ಯವಸ್ಥೆಯಲ್ಲಿನ ಲೋಪದೋಷದ ಭಾರಕ್ಕೆ ಕುಸಿದದ್ದು ವಿಪರ್ಯಾಸವಾದರೆ, ಇವರು ತೋರಿದ ದಾರಿಯಲ್ಲಿ ನಡೆದ ಅಮೇರಿಕಾ, ಯೂರೋಪ್ ವಿತ್ತ ಜಗತ್ತನ್ನ ೧೭ ನೇ ಶತಮಾನದಿಂದ ಇತ್ತೀಚಿನ ವರೆಗೆ ತನ್ನ ಇಚ್ಚೆಯಂತೆ ಕುಣಿಸಿದ್ದು ಕೌತುಕ. ಆಕಸ್ಮಾತ್ ಚೀನಾ ತನ್ನ ಅಂದಿನ ವ್ಯವಸ್ಥೆಯ ಲೋಪದ ಭಾರಕ್ಕೆ ಕುಸಿಯದೆ ಇದ್ದಿದ್ದರೆ ಇಂದಿನ ಡಾಲರ್ ವಿತ್ತ ಪ್ರಪಂಚದ ರಾಜನಾಗಿ ಮೆರೆಯಲು ಸಾಧ್ಯವಾಗುತ್ತಿತ್ತೇ? ಎನ್ನುವುದು ಇಂದಿಗೂ ಪ್ರಶ್ನೆ.

ಪೇಪರ್‌ನಲ್ಲಿ ಬರೆದು ಕೊಟ್ಟ ಮುಚ್ಚಳಿಕೆ ಪತ್ರ ಲೋಹಗಳಿಗೆ ಹೋಲಿಸಿದರೆ ಬಹಳಷ್ಟು ಹಗುರಾಗಿತ್ತು  ಹಾಗಾಗಿ ಅಂದಿನ ದಿನಗಳಲ್ಲಿ ಇದಕ್ಕೆ 'ಹಾರುವ ಹಣ'  ಎನ್ನುವ ಉಪನಾಮ ಕೂಡ ಚಾಲ್ತಿಯಲ್ಲಿತ್ತು.

**ನಾವು ಇಂದು ನೋಡುತ್ತಿರುವ ಬ್ಯಾಂಕ್ ನೋಟ್ ಚಲಾವಣೆಗೆ ಯಾವಾಗ ಬಂತು? ಚಲಾವಣೆಗೆ ತಂದವರಾರು?**

ಸ್ವೀಡನ್ ದೇಶ ಜಗತ್ತಿನ ಪ್ರಥಮ ಬ್ಯಾಂಕ್ ನೋಟ್ ೧೬೬೧ ರಲ್ಲಿ ಜಾರಿಗೆ ತಂದಿತು . ಚರಿತ್ರೆಯಿಂದ ಅದು ಪಾಠ ಕಲಿತಿತ್ತು. ಚೀನಾ ದೇಶ ಮಾಡಿದ ತಪ್ಪು ತನ್ನ ದೇಶದ ಶ್ರೀಮಂತರು ಬೇಕಾದ ಹಾಗೆ ಮುಚ್ಚಳಿಕೆ ಪತ್ರ ನೀಡಲು ಅನುಮತಿ ನೀಡಿದ್ದು. ಆದರೆ ಸ್ವೀಡನ್ ಅತ್ಯಂತ ನಂಬಿಕೆಗೆ ಅರ್ಹವಾದ ೧೬ ಸಂಸ್ಥೆಗಳಿಗೆ ಈ ರೀತಿಯ ನೋಟ್ ವಿತರಿಸುವ ಪರವಾನಿಗೆ (ಸರ್ಟಿಫಿಕೇಟ್ ) ನೀಡಿತು. ಅಲ್ಲದೆ ಅದರ ಮುದ್ರಿಸುವಿಕೆ, ವಿತರಣೆ ಎಲ್ಲವೂ ನಿಗದಿತ ಕಾನೂನಿನ ಚೌಕಟ್ಟಿನಲ್ಲಿ ಇರುವಂತೆ ರೂಪುರೇಷೆ ಸಿದ್ಧಪಡಿಸಿತು. ಸ್ವೀಡನ್ ತನ್ನ ಬ್ಯಾಂಕ್ ನೋಟ್ ನ ಮುದ್ರಣದ ಮೂಲವನ್ನ ಸ್ಪೈಸಸ್  ಅಂದರೆ ಮಸಾಲೆ ಪದಾರ್ಥ ಅವಲಂಬಿಸಿ ಮುದ್ರಿಸುತಿತ್ತು. ಉದಾಹರಣೆ ಅವರ ಬಳಿ ಇರುವ ಮಸಾಲೆ ಪದಾರ್ಥದ ಮೌಲ್ಯ ಎಷ್ಟಿರುತ್ತದೋ  ಅಷ್ಟು ಮೌಲ್ಯದ ಹಣವನ್ನ ಮುದ್ರಿಸುವ ಅವಕಾಶವಿತ್ತು.

ಸ್ವೀಡನ್ ನ ಈ ವ್ಯವಸ್ಥೆ ಕೆಲವೇ ತಿಂಗಳುಗಳಲ್ಲಿ ಅಂದಿನ ದಿನದಲ್ಲಿ ಅತಿ ಹೆಚ್ಚು ಯಶಸ್ಸು ಗಳಿಸಿತು. ಇತರೆ ಯೂರೋಪಿನ ದೇಶಗಳು ಈ ವ್ಯವಸ್ಥೆಯನ್ನ ಅತ್ಯಂತ ಕಡಿಮೆ ಸಮಯದಲ್ಲಿ ತಮ್ಮದಾಗಿಸಿಕೊಂಡವು. ಸ್ವೀಡನ್ ಮುದ್ರಣ ಮತ್ತು ಚಲಾವಣೆಯಲ್ಲಿ ಶಿಸ್ತನ್ನ ಪಾಲಿಸುತ್ತಿತ್ತು, ಆದರೇನು ಎಲ್ಲಾ ದೇಶಗಳು ಅವರಂತೆ ಶಿಸ್ತು ಪಾಲಿಸಲಿಲ್ಲ ಹೀಗಾಗಿ ಜಗತ್ತು ಪೂರ್ಣ ಒಪ್ಪಿಕೊಳ್ಳುವಂತ ಬ್ಯಾಂಕ್ ನೋಟ್ ಅದಾಗಲಿಲ್ಲ. ಯೂರೋಪಿನ ಇತರ ದೇಶಗಳು ತಮ್ಮಲ್ಲಿರುವ ಮಸಾಲೆ ಪದಾರ್ಥದ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯದ ನೋಟಗಳನ್ನ ಮುದ್ರಿಸ ಹತ್ತಿದವು. ಪರಿಣಾಮ ಯಾವ ನೋಟ್‌ಗೆ ಮೌಲ್ಯವಿದೆ ಯಾವುದಕ್ಕೆ ಇಲ್ಲ ಎನ್ನುವ ಗೊಂದಲ ಜನರಲ್ಲಿ ಹೆಚ್ಚಾಗಿ ಬ್ಯಾಂಕ್ ನೋಟ್ ಗಳು ಮೌಲ್ಯ ಕಳೆದು ಕೊಂಡು ಕೇವಲ ಪೇಪರ್ ಸ್ಥಿತಿ ತಲುಪಿತು.

ಇಂಗ್ಲೆಂಡ್, ಸ್ವಿಸ್, ಸ್ವೀಡನ್‌ಗಳಲ್ಲಿ ಇದ್ದ ಗೋಲ್ಡ್ ಸ್ಮಿತ್ಸ್ (ಚಿನ್ನದ ವ್ಯಾಪಾರಿಗಳು) ಗಳು ವಿತ್ತ ಪ್ರಪಂಚದ ಅಂದಿನ ಬ್ಯಾಂಕರ್‌ಗಳಂತೆ ಕೆಲಸ ಮಾಡುತ್ತಿದ್ದರು. ಇಡಿ ಜಗತ್ತು ಒಪ್ಪುವಂತ ಒಂದು ಕರೆನ್ಸಿ ಉಗಮವಾಗಲೇ ಇಲ್ಲ. ಗೋಲ್ಡ್ ಸ್ಮಿಥ್ ಅಥವಾ ಬ್ಯಾಂಕ್ ನೋಟ್ ವಿತರಿಸುವ ಸಂಸ್ಥೆಯ ಪ್ರಸಿದ್ಧಿಯ ಮೇಲೆ ನೋಟುಗಳ ಸ್ವೀಕೃತಿ ಜನರ ನಡುವೆ ತೀರ್ಮಾನವಾಗುತಿತ್ತು.  ೧೯ ನೇ ಶತಮಾನದಲ್ಲೂ ಅಮೇರಿಕಾ ದೇಶದಲ್ಲಿ ೫೦೦೦ ಬ್ಯಾಂಕ್ ನೋಟ್‌ಗಳು ಇದ್ದವು ಎನ್ನುವುದು ತೀರಾ ಇತ್ತೀಚಿನವರೆಗೆ ವಿತ್ತ ಪ್ರಪಂಚ ಎಷ್ಟು ಅವ್ಯವಸ್ಥೆಯ ಅಗರವಾಗಿತ್ತು ಎನ್ನುವುದಕ್ಕೆ ಧ್ಯೂತಕ .

ಸ್ಕಾಟಿಷ್ ಬ್ಯಾಂಕ್, ಇಂಗ್ಲೆಂಡ್ ಸೆಂಟ್ರಲ್ ಬ್ಯಾಂಕ್  ನಂತರದ ದಿನಗಳಲ್ಲಿ ಅಂದರೆ ೧೯೧೩ ರಲ್ಲಿ ಅಮೇರಿಕಾ ಫೆಡರಲ್ ರಿಸರ್ವ್ ಬ್ಯಾಂಕ್ ಸ್ಥಾಪಿಸಿದ ನಂತರ ಜಗತ್ತಿನ ಇತರ ದೇಶಗಳ ನಡುವಿನ ಮಾತುಕತೆ, ಒಪ್ಪಂದಗಳಿಂದ ಇಂದು ನಾವು ನೋಡುತ್ತಿರುವ ಬ್ಯಾಂಕ್ ನೋಟ್‌ಗಳು ಚಲಾವಣೆಗೆ ಬಂದವು. ಅಮೆರಿಕಾದ ಡಾಲರ್, ಬ್ರಿಟಿಷರ ಪೌಂಡ್ ಇತ್ತೀಚಿಗೆ ಬಂದ ಯುರೋ ಕರೆನ್ಸಿ ವಿತ್ತ ಪ್ರಪಂಚವನ್ನ ಆಳ ತೊಡಗಿದವು. ಹಾಗೆಂದ ಮಾತ್ರಕ್ಕೆ ಎಲ್ಲವೂ ಸರಿ ಹೋಗಿದೆ ಎಂದೇನೂ ಅಲ್ಲ. ಭಾರತದ ರೂಪಾಯಿ ಜಗತ್ತಿನ ಮುಂದುವರಿದ ದೇಶಗಳಲ್ಲಿ ಎಕ್ಸ್ಚೇಂಜ್ ಮಾಡಲು ಬರುವುದಿಲ್ಲ.  ಅಮೆರಿಕಾದ ಗೋಲ್ಡ್ ಬ್ಯಾಕಪ್ ಇಲ್ಲದ ಪೇಪರ್ ಕೊಟ್ಟರೆ ಭಾರತದಲ್ಲಿ

ನಿಗದಿತ ಮೌಲ್ಯದ ರೂಪಾಯಿ ನೀಡಲಾಗುತ್ತದೆ. ಅಮೇರಿಕಾದಲ್ಲಿ ನಮ್ಮ ರುಪಾಯಿಗೆ ಕವಡೆಯ ಕಿಮ್ಮತ್ತೂ ಇಲ್ಲ. ಉಗಮದ ಹಂತದಲ್ಲಿ ಒಂದು ಪೌಂಡು, ಒಂದು ಡಾಲರ್, ಒಂದು ರುಪಾಯಿಗೆ ಸಮವಾಗಿದ್ದವು. ಇಂದಿನ ಅವುಗಳ ನಡುವಿನ ಅಂತರ ವಿತ್ತ ಜಗತ್ತಿನಲ್ಲಿ ಮೌಲ್ಯಕ್ಕಿಂತ ಹೆಚ್ಚಾಗಿ ಮೌಲ್ಯ ನಿರ್ಧರಿಸುವರು ಮುಖ್ಯ ಎನ್ನುವುದನ್ನು ತೋರಿಸುತ್ತಿದೆ.

**ಪಾಲಿಮರ್ ಬ್ಯಾಂಕ್ ನೋಟ್ಸ್ ಏನಿದು ?**

ಹಣ ಎಂದರೆ ಅದು ಪೇಪರ್ ಮೇಲೆ ಮುದ್ರವಾಗಿರಬೇಕು ಎನ್ನುವ ಪರಿಕಲ್ಪನೆಯನ್ನ ಬದಿಗಿಟ್ಟು ಪ್ಲಾಸ್ಟಿಕ್ ಪೇಪರ್ ಮೇಲೆ ಆಸ್ಟ್ರೇಲಿಯಾ ೧೯೮೮ ರಲ್ಲಿ ಪ್ರಥಮ ಭಾರಿಗೆ ಪಾಲಿಮರ್ ಹಣವನ್ನ ಚಾಲನೆಗೆ ತಂದಿದೆ.

ಆಸ್ಟ್ರೇಲಿಯಾ ದೇಶದಲ್ಲಿ ಹೆಚ್ಚಾದ ನಕಲಿ ಹಣದ ಹಾವಳಿ ತಡೆಯಲು ಈ ಕ್ರಮವನ್ನ ಕೈಗೊಳ್ಳಲಾಗಿದೆ. ಪೇಪರ್‌ಗೆ ಹೋಲಿಸಿದರೆ ಹೆಚ್ಚು ಬಾಳಿಕೆ ಕೂಡ ಇರುವುದರಿಂದ ಇತ್ತೀಚಿನ ದಿನಗಳಲ್ಲಿ ಪಾಲಿಮರ್ ಬಳಸಿ ಹಣ ಮುದ್ರಿಸುವ ದೇಶಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಪೇಪರ್ ಹಣ ನಡೆದು ಬಂದ ದಾರಿಯನ್ನ ಮುಖ್ಯವಾಗಿ **ನಾಲ್ಕು** ಹಂತದಲ್ಲಿ ವಿಂಗಡಿಸಬಹುದು. ಅವೆಂದರೆ.

# ಚೀನಿಯರ ಪೇಪರ್ ಹಣದ ಪರಿಕಲ್ಪನೆ, ಉಗಮ, ಅವನತಿ.

# ಯೂರೋಪಿನ ವ್ಯಾಪಾರಿಗಳ , ಯೂರೋಪಿನ ನಾವಿಕರ ನಡುವಿನ ಒಪ್ಪಂದ ಪತ್ರಗಳು .

# ಆಧುನಿಕ ಬ್ಯಾಂಕ್ ನೋಟ್ ಜನಕ ಸ್ವೀಡನ್.

# ಸೆಂಟ್ರಲ್ ಬ್ಯಾಂಕ್‌ಗಳ ಜನನ, ಸಾರ್ವಜನಿಕವಾಗಿ ಒಪ್ಪಲ್ಪಟ್ಟ ಬ್ಯಾಂಕ್ ನೋಟುಗಳ ಉಗಮ.

ಇವತ್ತು ಪರವಾಗಿಲ್ಲ ಎನ್ನುವ ಒಂದು ವ್ಯವಸ್ಥೆ ಸೃಷ್ಟಿ ಆಗುವುದಕ್ಕೆ ಮುಂಚೆ ಎಷ್ಟೆಲ್ಲಾ ತಲ್ಲಣಗಳು, ಎಷ್ಟೆಲ್ಲಾ ಹೊಯ್ದಾಟಗಳು! ನಮಗೆ ಇಂದು ಸಿಕ್ಕಿರುವ ಆರ್ಥಿಕ ಸ್ವಾತಂತ್ರದ ಹಿಂದಿನ ಶಕ್ತಿಗಳ ನೆನೆಯೋಣ ಅಂತೆಯೇ ಸಿಕ್ಕಿರುವ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸೋಣ.

[ಕಣಜದಲ್ಲಿ ಪ್ರಕಟವಾಗುವ ಅಂಕಣ ಬರಹಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಅಂಕಣಕಾರರದು]

## ಹಣ ಬರುವ ಮೊದಲು ಹೇಗಿತ್ತು ವಿತ್ತ ಪ್ರಪಂಚ?

'ದುಡ್ಡೇ ದೊಡಪ್ಪ', 'ಹಣವಿದ್ದವನದೇ ಜಗತ್ತು', 'ಮನಿ ಮೇಕ್ಸ್ ದಿ ವರ್ಲ್ಡ್ ಗೋ ಅರೌಂಡ್' ಎಂದು ಹಿರಿಯರೋ ಸ್ನೇಹಿತರೋ ಹೇಳುವುದು ನೀವು ಕೇಳಿರಬಹುದು. ಹೌದು, ಅವರು ಹೇಳುವುದು ನಿಜ. ಇವತ್ತು ಹಣವಿಲ್ಲದೆ ಯಾವುದೇ ಕೆಲಸ ನಡೆಯುವುದನ್ನೂ ಊಹಿಸಿಕೊಳ್ಳಲು ಸಾಧ್ಯವಿಲ್ಲ.

ಜಗತ್ತನ್ನೇ ಆಕ್ರಮಿಸಿರುವ ಈ ಹಣದ ಸೃಷ್ಟಿಗೆ ಮುಂಚೆ ನಮ್ಮ ಹಿರಿಯರು ಹೇಗೆ ಬದುಕಿದ್ದರು? ಅವರ ಕಾಲದಲ್ಲೂ ಕೊಡು-ಕೊಳ್ಳುವಿಕೆಯ ಮಾಧ್ಯಮವಾಗಿ ವರ್ತಿಸಲು ಹಣವಲ್ಲದಿದ್ದರೆ ಮತ್ತೇನೋ ಇದ್ದಿರಲೇಬೇಕು. ಹಾಗಾದರೆ ಇಂದಿನ ರೂಪದ ಹಣ ಚಾಲ್ತಿಗೆ ಬರುವ ಮುಂಚೆ ಯಾವೆಲ್ಲಾ ವಸ್ತುಗಳು ವಿನಿಮಯ ಮಾಧ್ಯಮವಾಗಿ ಬಳಕೆಯಲ್ಲಿದ್ದವು ಗೊತ್ತೇ ?

* ಬ್ಯಾಟ್ ಗ್ವಾನೊ: ದಕ್ಷಿಣ ಅಮೇರಿಕಾ ದೇಶಗಳ ಕೆಲವು ಗುಹೆಗಳಲ್ಲಿ ಬಾವಲಿಗಳ, ಸಮುದ್ರದ ಹಕ್ಕಿಗಳ ಹಿಕ್ಕೆ ಸಂಗ್ರಹವಾಗುತಿತ್ತು. ಇದನ್ನು ಅಂದಿನ ಜನ ತಮ್ಮ ವ್ಯವಸಾಯದಲ್ಲಿ ಗೊಬ್ಬರದಂತೆ ಬಳಸುತ್ತಿದ್ದರು. ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಂತರದಿಂದಾಗಿ ಇದನ್ನು ವಿನಿಮಯ ಮಾಧ್ಯಮವಾಗಿ ಅಂದಿನ ಜನ ಒಪ್ಪಿರಬಹುದು.

* ರಕ್ತ: ಆಶ್ಚರ್ಯ ಅನಿಸಿದರೂ ನಿಜ, ರಕ್ತ ಕೂಡ ವಿನಿಮಯ ಮಾಧ್ಯಮವಾಗಿತ್ತು (ರಕ್ತ ನೀಡಿದರೆ ಹಣ ನೀಡುವ ಬ್ಲಡ್ ಬ್ಯಾಂಕ್‌ಗಳು ಇಂದಿಗೂ ಇವೆಯಲ್ಲ!).

* ಮಸಾಲೆ ಪದಾರ್ಥಗಳು: ಎಲ್ಲಾ ಮಸಾಲೆ ಪದಾರ್ಥಗಳು ವಿನಿಮಯ ಮಾಧ್ಯಮವಾಗಿ ರಾಜರಂತೆ ಮೆರೆದ ಉದಾಹರಣೆ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಜಾಯಿಕಾಯಿ (ಆಡು ಭಾಷೆಯಲ್ಲಿ ಜಾಕಾಯಿ) ವ್ಯಾಪಾರದ ಮೇಲಿನ ಸ್ವಾಮ್ಯಕ್ಕಾಗಿ ಘೋರ ಯುದ್ಧವೇ ನಡೆದುಹೋಗಿದೆ: ಇಂಡೋನೇಷ್ಯಾದಲ್ಲಿರುವ 'ರನ್' ಎನ್ನುವ ದ್ವೀಪದ ಮೇಲಿನ ಆಧಿಪತ್ಯಕ್ಕಾಗಿ ಈ ಯುದ್ಧ ನಡೆದಿತ್ತಂತೆ!

* ಚರ್ಮ: ಸಿಂಹ, ಹುಲಿ, ಜಿಂಕೆಗಳ ಚರ್ಮದಿಂದ ಮಾಡಿದ ಹಾಸು (ಕಾರ್ಪೆಟ್), ನಡುಪಟ್ಟಿ (ಬೆಲ್ಟ್) ಅಲ್ಲದೆ ಗುಂಡಾಗಿ ನಾಣ್ಯದ ರೀತಿಯಲ್ಲಿ ಕತ್ತರಿಸಿದ ಚರ್ಮದ ತುಂಡುಗಳು ಕೂಡ ವಿನಿಮಯ ಮಾಧ್ಯಮವಾಗಿ ಬಳಸಲ್ಪಟ್ಟಿವೆ.

* ಟೀ ಸೊಪ್ಪು: ಟೀ ಸೊಪ್ಪು ವಿನಿಮಯ ಮಾಧ್ಯಮವಾಗಿ ಪ್ರಚಲಿತವಾಗಿದ್ದ ಸಮಯದಲ್ಲಿ ಟೀ ಬೆಳೆಯುವ ಪ್ರದೇಶಗಳ ಮೇಲಿನ ಏಕಸ್ವಾಮ್ಯಕ್ಕಾಗಿ ಅಂದಿನ ಜನಾಂಗಗಳ ನಡುವೆ ಬಹಳಷ್ಟು ಕದನಗಳು ನಡೆದಿವೆ.

* ಹೊಳೆಯುವ ಕಲ್ಲುಗಳು (ಪ್ರೆಶಿಯಸ್ ಸ್ಟೋನ್ಸ್): ವಜ್ರ ಸೇರಿದಂತೆ ಹಲವು ಬಗೆಯ ಹೊಳೆಯುವ ಕಲ್ಲುಗಳನ್ನು ಜನ ವಿನಿಮಯ ಮಾಧ್ಯಮವಾಗಿ ಉಪಯೋಗಿಸಿದ್ದಾರೆ. ನಿಗದಿತ ತೂಕ ಮತ್ತು ಆಕಾರದಲ್ಲಿ ಅವುಗಳನ್ನ ವಿಭಜಿಸಿ ವಿನಿಮಯದಲ್ಲಿ ಬಳಸಲು ನಮ್ಮ ಹಿಂದಿನವರು ಕಲಿತಿದ್ದರು.

* ಲೋಹಗಳು: ನಾಗರೀಕತೆ ಬೆಳೆದಂತೆ ವಿನಿಮಯ ಮಾಧ್ಯಮವಾಗಿ ಲೋಹಗಳ ಬಳಕೆ ಪ್ರಾರಂಭವಾಯಿತು. ತಾಮ್ರ, ಬೆಳ್ಳಿ, ಬಂಗಾರ ಲೋಹಗಳ ಪಟ್ಟಿಯಲ್ಲಿ ಮುಖ್ಯ ಸ್ಥಾನ ಪಡೆಯುತ್ತವೆ . ಯಾವುದರ ಸಿಗುವಿಕೆ ವಿರಳವೋ ಅವು ಹೆಚ್ಚು ಮಾನ್ಯತೆ ಪಡೆಯುತ್ತಿದ್ದವು . ಹೀಗಾಗಿ ಲೋಹಗಳು ವಿನಿಮಯ ಮಾಧ್ಯಮವಾಗಿ ಜನಪ್ರಿಯಗೊಂಡವು. ಈ ಪೈಕಿ ಬಂಗಾರದ ಬಗೆಗಿನ ಮೋಹ ಮಾತ್ರ ಮಿಕ್ಕೆಲ್ಲಾ ವಿನಿಮಯ ಮಾಧ್ಯಮಗಳಿಂತ ಒಂದು ಕೈ ಹೆಚ್ಚು. ಮೊಟ್ಟಮೊದಲ ಬಾರಿಗೆ ಕ್ರಿಸ್ತ ಪೂರ್ವ ೫೫೦ರ ವೇಳೆಯಲ್ಲಿ ಇಂದಿನ ಟರ್ಕಿ ದೇಶದಲ್ಲಿ ಬಂಗಾರವನ್ನು ವಿನಿಮಯ ಮಾಧ್ಯಮವಾಗಿ ಬಳಸಿದ್ದಾಗಿ ಚರಿತ್ರೆಯಲ್ಲಿ ಉಲ್ಲೇಖವಿದೆ. ೧೯ನೇ ಶತಮಾನದ ವೇಳೆಗೆ ಜಗತ್ತಿನ ಬಹುತೇಕ ದೇಶಗಳು ಕಾಗದದ ಹಣವನ್ನು (ಪೇಪರ್ ಕರೆನ್ಸಿ) ವಿನಿಮಯ ಮಾಧ್ಯಮವನ್ನಾಗಿ ಬಳಸುತ್ತಿದ್ದವು. ಆದರೂ ಬಂಗಾರದ ಮೇಲಿನ ಮೋಹ ಮಾತ್ರ ಇಳಿಯಲಿಲ್ಲ. ಅಂದರೆ ಮೂಲ ಬಂಗಾರವೇ! ಸರಳವಾಗಿ ಹೇಳಬೇಕೆಂದರೆ ಪೇಪರ್ ಹಣ ಮುದ್ರಿಸಲು ನಿಗದಿತ ಮಟ್ಟದ ಬಂಗಾರ ಇರಬೇಕಿತ್ತು. ಇದನ್ನು ಗೋಲ್ಡ್ ಸ್ಟ್ಯಾಂಡರ್ಡ್ ಎಂದು ಕರೆಯಲಾಗುತ್ತದೆ. ಅಂದರೆ, ೧೦೦ ರೂಪಾಯಿ ಮೌಲ್ಯದ ನೋಟು ಮುದ್ರಿಸಿದರೆ ಬ್ಯಾಂಕಿನ ಬಳಿ ನೂರು ರೂಪಾಯಿ ಮೌಲ್ಯದ ಬಂಗಾರ ಇರಬೇಕಿತ್ತು. ಹೀಗೆ ನೂರಕ್ಕೆ ನೂರು ಗೋಲ್ಡ್ ಠೇವಣಿ ಕುಸಿಯುತ್ತ ಬಂದು, ಎರಡನೇ ಮಹಾಯುದ್ಧದ ನಂತರ ಅಮೇರಿಕಾ ದೇಶವು ನೋಟ್ ಮುದ್ರಿಸಲು ಗೋಲ್ಡ್ ಸ್ಟ್ಯಾಂಡರ್ಡ್ ಅನ್ನು ತೆಗೆದುಹಾಕಿದೆ. ಮೌಲ್ಯ ಅಳೆಯಲು ಯಾವುದೇ ಮಾನದಂಡ ಇಲ್ಲದ ಅಮೇರಿಕಾ ಡಾಲರ್ ಇಂದು ವಿತ್ತ ಜಗತ್ತನ್ನ ಆಳುತ್ತಿರುವುದು ಜಗತ್ತಿನ ವಿಪರ್ಯಾಸಗಳಲ್ಲೊಂದು.

* ಇತರ ವಸ್ತುಗಳು: ಉಪ್ಪು, ಬಾರ್ಲಿ, ಮೀನು, ಅಕ್ಕಿ, ಬಟ್ಟೆ ಹಾಗೂ ಜಾನುವಾರುಗಳನ್ನು ಕೂಡ ವಿನಿಮಯ ಮಾಧ್ಯಮದಂತೆ ಬಳಸಿದ್ದಕ್ಕೆ ಇತಿಹಾಸದಲ್ಲಿ ಅನೇಕ ಸಾಕ್ಷಿಗಳು ಸಿಗುತ್ತವೆ. ಸಮುದ್ರದಲ್ಲಿ ಸಿಗುವ ಮುತ್ತು, ಹವಳ, ಶಂಖದ ಚಿಪ್ಪುಗಳೂ ವಿನಿಮಯ ಮಾಧ್ಯಮವಾಗಿ ಚಾಲ್ತಿಯಲ್ಲಿದ್ದವಂತೆ. ಮದ್ದುಗುಂಡುಗಳನ್ನು, ಶಸ್ತ್ರಾಸ್ತಗಳನ್ನೂ ಹಿಂದಿನ ರಾಜಮಹಾರಾಜರು ವಿನಿಮಯ ಮಾಧ್ಯಮವಾಗಿ

ಬಳಸುತ್ತಿದ್ದದ್ದುಂಟು. ನಾಗರೀಕತೆಯೇ ನಾಚುವಂತೆ ಮಾಡುವ 'ಜೀತ ಪದ್ಧತಿ' ಕೂಡ ಒಂದು ರೀತಿಯ ವಿನಿಮಯ ಮಾಧ್ಯಮವೇ! ಮನುಷ್ಯರನ್ನು ಗುಲಾಮರಂತೆ ಮಾರುತ್ತಿದ್ದುದು ಕೂಡ ಒಂದು ರೀತಿಯ ವಿನಿಮಯದ ಅಡಿಯಲ್ಲಿಯೇ ಬರುತ್ತದೆ ಎನ್ನಬಹುದು.

ಇವೆಲ್ಲದಕ್ಕಿಂತ ವಿಭಿನ್ನವಾಗಿ ಸೇವೆಯನ್ನೇ ಮುಖ್ಯವಾಗಿಟ್ಟುಕೊಂಡು ಮಹಾನ್ ಸಾಮ್ರಾಜ್ಯ ಕಟ್ಟಿದ್ದು ಇಂಕಾ ನಾಗರೀಕತೆಯ ವೈಶಿಷ್ಟ್ಯ.

ಇಂಕಾ ನಾಗರೀಕತೆಯ ಬಗ್ಗೆ ಕೇಳಿಲ್ಲದವರು ಯಾರು? ಇಂಕಾ ಎಂದ ತಕ್ಷಣ ನೆನಪಿಗೆ ಬರುವುದು ದಕ್ಷಿಣ ಅಮೆರಿಕಾದ ಪೆರು ದೇಶ. ಆದರೆ ಇಂಕಾ ಮಹಾಸಾಮ್ರಾಜ್ಯ ಪೆರುವಷ್ಟೇ ಅಲ್ಲ, ಬೊಲಿವಿಯಾ, ಈಕ್ವಾಡೋರ್, ಮಧ್ಯ ಚಿಲಿ, ಉತ್ತರ ಅರ್ಜೆಂಟೀನಾ, ದಕ್ಷಿಣ ಕೊಲಂಬಿಯಾಗಳನ್ನೂ ಒಳಗೊಂಡಿತ್ತು. ಅಲ್ಲಿನ ಜನರು ವಿನಿಮಯಕ್ಕಾಗಿ ಯಾವುದೇ ವಸ್ತು ಬಳಸದೆ ಇಷ್ಟೆಲ್ಲ ದೊಡ್ಡ ಸಾಮ್ರಾಜ್ಯ ಕಟ್ಟುವಲ್ಲಿ ಯಶಸ್ವಿಯಾಗಿದ್ದರು ಎನ್ನುವುದು ಇಂದಿಗೂ ನಂಬಲು ಕಷ್ಟವಾಗುವ ಸಂಗತಿ!

ಇಂಕಾ ಸಾಮ್ರಾಜ್ಯದ ನೆರೆಹೊರೆಯಲ್ಲಿ ಇದ್ದ ಅಜ್ಟೆಕ್ ಮತ್ತು ಮಾಯನ್ನರು ಹುರಳಿ ಬೀಜ ಹಾಗೂ ಬಟ್ಟೆಯನ್ನು ವಿನಿಮಯ ಮಾಧ್ಯಮವನ್ನಾಗಿ ಬಳಸುತ್ತಿದ್ದರು. ಆದರೆ ಇಂಕನ್ನರು ಮಾತ್ರ ಇಂತಹ ವಿಷಯಗಳಿಗೆ ತಲೆಕೆಡಿಸಿಕೊಳ್ಳದೆ ತಮ್ಮದೇ ಆದ 'ಮಿತ' ಎನ್ನುವ ಪದ್ಧತಿಯನ್ನು ಜಾರಿಗೆ ತಂದಿದ್ದರು. ಅದರ ಪ್ರಕಾರ ೧೫ ವರ್ಷ ತುಂಬಿದ ಪ್ರತಿ ಇಂಕಾ ಪುರುಷ ದೇಶಕ್ಕಾಗಿ ಕೆಲಸ ಮಾಡಬೇಕಿತ್ತು. ಎಷ್ಟು ಕೆಲಸವಿದೆ ಎನ್ನುವುದರ ಮೇಲೆ ವರ್ಷದಲ್ಲಿ ಎಷ್ಟು ದಿನ ಕೆಲಸ ಮಾಡಬೇಕು ಎನ್ನುವುದು ನಿರ್ಧಾರವಾಗುತ್ತಿತ್ತು. ಹೆಚ್ಚೆಂದರೆ ವರ್ಷದ ಶೇ.೭೦ ಭಾಗ ಕೆಲಸ ಉಳಿದ ೩೦ ಭಾಗ ವಿಶ್ರಾಂತಿ. ಇದಕ್ಕೆ ಬದಲಾಗಿ ವಾಸಿಸಲು ಕಟ್ಟಡ, ಉಡಲು ಬಟ್ಟೆ, ಸೇವಿಸಲು ಆಹಾರ, ವಿಹಾರಕ್ಕೆ ಉತ್ತಮ ರಸ್ತೆ - ಹೀಗೆ ಬದುಕಲು ಏನು ಬೇಕೋ ಅವೆಲ್ಲವೂ ಪುಕ್ಕಟೆ ಸಿಗುತಿತ್ತು. ಮನೋದೈಹಿಕ ಸ್ಥಿತಿಗೆ ಅನುಗುಣವಾಗಿ ಕೆಲಸ ಹಂಚಲಾಗುತಿತ್ತು. ಅದೊಂದು ರೀತಿಯಲ್ಲಿ 'ಎಲ್ಲವೂ ಎಲ್ಲರಿಗೂ ಸೇರಿದ್ದು' ಎನ್ನುವ ಭಾವನೆ ಮೇಲೆ ಕಟ್ಟಲಾಗಿದ್ದ ನಾಗರೀಕತೆ.

ಸೂಕ್ಷ್ಮವಾಗಿ ನೋಡಿದರೆ ಇಲ್ಲಿಯೂ ವಿನಿಮಯ ಉಂಟು, ಅದರೆ ಅದು ಕಣ್ಣಿಗೆ ಕಾಣುವ ರೂಪದಲ್ಲಿ ಇಲ್ಲ ಅಷ್ಟೇ. ಇಲ್ಲಿ ಸೇವೆಯೇ (ಸರ್ವಿಸ್) ವಿನಿಮಯ. ಸೇವೆ ಸಂಗ್ರಹಿಸಿಡಲು ಆಗದಿರುವ ವಿನಿಮಯವಾದ್ದರಿಂದ ಆ ನಾಗರೀಕತೆ ಹೆಚ್ಚು ಸಂತೋಷದಿಂದ ಬದುಕಲು ಸಾಧ್ಯವಾಯಿತು. ಸಂಗ್ರಹಿಸಿ ಇಡಬಹುದಾದ ಯಾವುದೇ ವಿನಿಮಯ ಬದುಕಲ್ಲಿ ಬೇಕಿಲ್ಲದ ಪೈಪೋಟಿ ಅಲ್ಲದೆ ಮತ್ತೇನನ್ನೂ ನೀಡದು.

ನಾವೂ ಇಂಕನ್ನರಿಂದ ಕಲಿಯೋಣವೇ?

[ಕಣಜದಲ್ಲಿ ಪ್ರಕಟವಾಗುವ ಅಂಕಣ ಬರಹಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಅಂಕಣಕಾರರದು]

***